ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 87/2016

(ಫ್ರಾಸಾ-2 ಚಾಸಾ-7 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 09.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟರಾಜು |
| ತಂದೆಯ ಹೆಸರು | - | ಮುನಿವೆಂಕಟಪ್ಪ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಚಾಲಕ |
| ವಾಸ | - | ಚಿಕ್ಕಸಂದ್ರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮುನಿವೆಂಕಟಪ್ಪ ನನ್ನ ತಂದೆ. ಅವರು ಈಗ ಸುಮಾರು 4 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಚಾಸಾ-8 ನನ್ನ ತಮ್ಮ. ಆತ ಸಹ ತೀರಿಕೊಂಡಿದ್ದಾರೆ. ಚಾಸಾ-6 ಅವರು ಈಗ ಸಹ ತೀರಿಕೊಂಡಿದ್ದಾರೆ. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ನ್ಯಾಯಾಲಯದ ಮುಂದೆ ಹಾಜರಿರುವ 1, 2 ಮತ್ತು 4 ಆರೋಪಿತರು ಮತ್ತು ಗೈರು ಹಾಜರಿರುವ 3 ನೇ ಆರೋಪಿ ಸಂದೀಪ್ ಇವರ ಪರಿಚಯ ಇದೆ. ಆರೋಪಿತರು ಗೌಡ ಜಾತಿಯವರು.

2. ಚಿಕ್ಕಸಂದ್ರ ಗ್ರಾಮದಲ್ಲಿ ನಮಗೆ ಜಮೀನು ಇದೆ ಮತ್ತು ಅದರ ಸರ್ವೆ ನಂಬರ್ 45 ಇದೆ. ಅದರಲ್ಲಿ ಹುಣಸೇಮರಗಳು, ಹಲಸಿನ ಮರಗಳು ಇವೆ. ದಿಃ31.12.2015 ರಂದು ಬೆಳಗ್ಗೆ ಸುಮಾರು ಹತ್ತು ಘಂಟೆಗೆ ನಾನು, ನನ್ನ ತಂದೆ ಚಾಸಾ-1, ನನ್ನ ಇಬ್ಬರು ತಮ್ಮಂದಿರು ಸೇರಿ ಹುಣಸೆಹಣ್ಣನ್ನು ಉದುರಿಸೋಣ ಎಂದು ಜಮೀನಿಗೆ ಹೋಗಿದ್ದೆವು. ಆಗ ಎಲ್ಲಾ ಆರೋಪಿತರು ಮತ್ತು ಇನ್ನೂ 4-5 ಜನರು ಅಲ್ಲಿಗೆ ಬಂದು ನಮಗೆ ಏ ಮಾದಿಗ ನನ್ನ ಮಕ್ಕಳಾ, ನೀವೆನಕ್ಕೊ ಈ ಜಮೀನಿಗೆ ಬಂದಿದ್ದೀರಾ ಎಂದು ಬೈದರು. ಘಟನಾ ಸ್ಥಳದ ಹತ್ತಿರ ಅಂಬೇಡ್ಕರ್ ಇವರ ಭಾವಚಿತ್ರ ಇರುವ ಬೋರ್ಡ್ ಇತ್ತು. ಅದನ್ನು ಕಿತ್ತಿ ಕಾಲಲ್ಲೆಲ್ಲಾ ಅದನ್ನು ಒದ್ದರು. ನನ್ನ ತಂದೆಗೆ ಆರೋಪಿ ರಾಮೇಗೌಡ ಚಪ್ಪಲಿಯಿಂದ ನನ್ನ ತಂದೆಯ ತಲೆ ಬಗ್ಗಿಸಿ

ಹೊಡೆದ. ನಮ್ಮನ್ನು ಸಹ ಆರೋಪಿತರು ತಳ್ಳಾಡಿದರು. ನಾನು ಮತ್ತು ನನ್ನ ತಂದೆ ಫಿರ್ಯಾದಿ ಕೊಡಲು ಪೋಲಿಸ್ ಠಾಣೆಗೆ ಹೋದೆವು. ಠಾಣೆಯಲ್ಲಿ ನನ್ನ ತಂದೆ ಫಿರ್ಯಾದಿ ನೀಡಿದರು. ನನ್ನ ತಂದೆ ನೀಡಿದ ಫಿರ್ಯಾದಿಯನ್ನು ನಾನು ಗುರ್ತಿಸುತ್ತೇನೆ. ಈಗ ತೋರಿಸಲಾದ ದಾಖಲೆ ನನ್ನ ತಂದೆ ನೀಡಿದ ಫಿರ್ಯಾದಿ ಇದ್ದು ಅದರ ಮೇಲೆ ಅವರ ಸಹಿ ಸದರಿ ದಾಖಲೆಯನ್ನು ನಿಪಿ-4 ಎಂದು ಹಾಗೂ ಅದರಲ್ಲಿರುವ ಸಾಕ್ಷಿದಾರರು ಗುರ್ತಿಸಿದ ಅವರ ತಂದೆಯ ಸಹಿಯನ್ನು ನಿಪಿ-4(ಎ) ಗುರ್ತಿಸಲಾಯಿತು.

3. ಫಿರ್ಯಾದಿ ನೀಡಿದ ನಂತರ ಪೋಲಿಸರು ಮಹಜರ್ ಮಾಡಲು ಸ್ಥಳಕ್ಕೆ ಬಂದಿದ್ದರು. ಆಗ ಆರೋಪಿತರು ಕಿತ್ತುಹಾಕಿದ್ದ ಬೋರ್ಡನ್ನು ಪೋಲಿಸರು ಅಮಾನತುಪಡಿಸಿಕೊಂಡರು. ಮಹಜರ್ ಮಾಡಲು ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಇರಲಿಲ್ಲ. ಈಗ ತೋರಿಸಿದ ನಿಪಿ-2 ರಲ್ಲಿರುವ ಬೋರ್ಡನ್ನೇ ಆರೋಪಿತರು ಕಿತ್ತು ಹಾಕಿದ್ದರು.

4. ಗಲಾಟೆ ಆಗುವಾಗ ಕೃಷ್ಣಮೂರ್ತಿ, ಜಗದೀಶ ಬಂದು ಜಗಳ ಬಿಡಿಸಿ ಆರೋಪಿತರನ್ನು ಕಳುಹಿಸಿದರು. ಆರೋಪಿತರು ನಮಗೆ ಅವಾಚ್ಯ ಶಬ್ದದಿಂದ ಸಹ ಬೈದರು. ಹುಣಸೇ ಹಣ್ಣನ್ನು ತೆಗೆದರೆ ನಮ್ಮನ್ನು ಸಾಯಿಸುತ್ತೇವೆಂದು ಸಹ ಆರೋಪಿತರು ಬೆದರಿಸಿದರು.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು